ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಹಾಲುರಾಮೇಶ್ವರ ಕ್ಷೇತ್ರದಲ್ಲಿ ಒಬ್ಬರು ಕನ್‌ವೀನರ್ ಇದ್ದರೂ ಸಹ ಯಾವ ಆಧಾರದ ಮೇಲೆ ಬಸವರಾಜಪ್ಪನವರಿಗೆ ೧೫೦೦ ರೂಪಾಯಿಗಳನ್ನು ಕೊಟ್ಟರು ; ಆದರೂ ಕೆಲಸ ಆಗಿಲ್ಲ. ಇದರ ಬಗ್ಗೆ ಏನು ವಿವರಣೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಅಲ್ಲಿ ಒಂದು ಕಮಿಟಿಯನ್ನು ನೇಮಿಸಿ, ಒಬ್ಬ ಕನ್‌ವೀನರನ್ನು ನೇಮಕ ಮಾಡಲಾಗಿತ್ತು. ಅವರು ರಾಜೀನಾಮೆ ಕೊಟ್ಟರು. ಶಿವರಾತ್ರಿ ಹಬ್ಬ ಒಂದಂಥ ಸಮಯದಲ್ಲಿ ಸಣ್ಣ ರಿಪೇರಿ ಮತ್ತು ಸುಣ್ಣ ಬಳಿಸುವುದಕ್ಕಾಗಿ ೫೦೦ ಮತ್ತು ೧೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೆಚ್ಚು ಹಣ ಕೊಟ್ಟಿಲ್ಲ.

ಶ್ರೀ ಜಿ. ರಾಮದಾಸ್.—ಆದಷ್ಟು ಜಾಗ್ರತೆ ಕನ್‌ವೀನರನ್ನು ನೇಮಿಸಿ ದೇವಸ್ಥಾನದ ಕೆಲಸಗಳನ್ನು ಮಾಡಿಸಿ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡುತ್ತೇನೆ.

ಅನಧಿಕೃತ ಸಾಗುವಳಿಗಾರರ ಜಮೀನಿಗೆ ಮಂಜೂರಾತಿ

೧೦೭೨ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಕುಟುಂಬದವರ ಸಂಖ್ಯೆ ಎಷ್ಟು ಹಾಗೂ ಅವರಿಂದ ಅರ್ಜಿಗಳೇನಾದರೂ ಸರ್ಕಾರದವರಿಗೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅಂತಹ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಇ) ಅವುಗಳಲ್ಲಿ ಎಷ್ಟು ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ ?

ಈ) ಬಾಕಿ ಉಳಿದಿರುವ ಅರ್ಜಿಗಳನ್ನು ಸರ್ಕಾರದವರು ಎಷ್ಟು ಸಮಯದೊಳಗೆ ಇತ್ಯರ್ಥ ಮಾಡುವರು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಅರ್ಜಿಗಳು ಬಂದಿವೆ. ೧೭೮೦೦-೫೨ ಎಕರೆ ವಿಸ್ತೀರ್ಣವನ್ನು ೧೩೪೪೨ ಜನರು ಸಾಗುವಳಿ ಮಾಡುತ್ತಿದ್ದಾರೆ.

ಆ) ೧೩೪೪೨ ಅರ್ಜಿಗಳು ಬಂದಿವೆ.

ಇ) ೩೫೩೭.೯೦ ಎಕರೆ ಜಮೀನನ್ನು ೩,೦೧೩ ಜನರಿಗೆ ಮಂಜೂರು ಮಾಡಲಾಗಿದೆ.

ಈ) ಉಳಿದವು ಅಕ್ಷೇಪರ ಜಮೀನುಗಳಲ್ಲಿ ಅಕ್ರಮಣವಿದ್ದು, ಅಂತಹ ಅಕ್ರಮಣಗಳನ್ನು ಸಕ್ರಮ ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಸಚಿವರ ಉತ್ತರದ ಪ್ರಕಾರ ೧೦ ಸಾವಿರಕ್ಕೂ ಮಿಕ್ಕಿ ಅರ್ಜಿಗಳು ಬಾಕಿ ಇದೆ. ಯಾವ ಯಾವ ಕಾರಣಕ್ಕೋಸ್ಕರ ಮಂಜೂರಾತಿಯಾಗಲಿಕ್ಕೆ ಬಾಕಿ ಇದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಫಾರೆಸ್ಟ್ ಲ್ಯಾಂಡ್‌ನಲ್ಲಿದೆ. ಕೆಲವು ಬೇರೆ ಬೇರೆ ಜಮೀನುಗಳಾಗಿದ್ದು ಆತಂಕ ಇದರಲ್ಲಿದೆ. ಇದರ ಬಗ್ಗೆ ಆಲೋಚನೆ ಮಾಡುತ್ತಾ ಇದ್ದೇನೆ.

ಶ್ರೀ ವಿನಯಕುಮಾರ್ ಸೊರಕೆ.—ನಮಗೆ ತಿಳಿದಮಟ್ಟಿಗೆ ಫಾರೆಸ್ಟ್ ಲ್ಯಾಂಡ್‌ನಲ್ಲಿದೆ ಎಂದು ಏನು ಹೇಳುತ್ತಿದ್ದೀರಿ, ಅನಧಿಕೃತವಾಗಿ ಅಕ್ರಮಣ ಮಾಡಿದ ನಂತರ ಫಾರೆಸ್ಟ್ ಲ್ಯಾಂಡ್ ಎಂದು ಡಿಕ್ಲೇರ್ ಮಾಡಿದ್ದಾರೆ. ೨೦-೩೦ ವರ್ಷಗಳಿಂದಲೂ ಸಾಗುವಳಿ ಮಾಡುತ್ತಿದ್ದು ಯಾವುದೇ ರೀತಿಯ ಮಂಜೂರಾತಿಯಿಲ್ಲದೆ ತೊಂದರೆಪಡುತ್ತಿದ್ದಾರೆ. ಅಕ್ರಮಣಗಳನ್ನು ಸಕ್ರಮ ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. ಯಾವ ಯೋಜನೆ ಇದೆ, ಯಾವ ರೀತಿ ಕಾರ್ಯಕ್ರಮ ಮಾಡುತ್ತೀರಿ ?

ಶ್ರೀ ಎಸ್ ಆರ್. ಬೊಮ್ಮಾಯಿ —ಯಾವಾಗ ಫಾರೆಸ್ಟ್ ಇಲಾಖೆಗೆ ಹೋಗಿದೆ ಎನ್ನುವುದನ್ನು ಪ್ರತಿಯೊಂದು ಗ್ರಾಮದಲ್ಲೂ ನೋಡಿದಾಗ ಗೊತ್ತಾಗುತ್ತದೆ. ಸದ್ಯಕ್ಕೆ ಇದರ ವಿವರಗಳು ಇಲ್ಲ. ಅತಿಕ್ರಮಣ ಮಾಡಿದಂಥ ಜಮೀನುಗಳನ್ನು ರೆಗ್ಯುಲರೈಸ್ ಮಾಡುವುದರ ಬಗ್ಗೆ ಸರ್ಕಾರ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು —ಶ್ರೀ ಆರ್. ವೆಂಕಟರಾವಾಯ್ಯ : ಗೈರು ಹಾಜರಿ
ಶ್ರೀ ಬಿ. ಐ. ಪಾಟೀಲ್ : ಗೈರು ಹಾಜರಿ
ಶ್ರೀ ಬಸವರಾಜ ಪಾಟೀಲ್ : ಗೈರು ಹಾಜರಿ

ಮುಂದೂಡಲಾದ ಪ್ರಶ್ನೆ ಸಂಖ್ಯೆ : ೨೭೫ (೪೧೬)

ವಾಣಿವಿಲಾಸ ಸಕ್ಕರೆ ಕಾರ್ಖಾನೆಯಲ್ಲಿ ನಷ್ಟ

೪೧೬(೫) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕಿನಲ್ಲಿ ವಾಣೀವಿಲಾಸ ಸಹಕಾರ ಸಕ್ಕರೆ ಕಾರ್ಖಾನೆಯು ರೈತರ ಷೇರು ಬಂಡವಾಳದೊಡನೆ ಸ್ಥಾಪನೆಯಾಗಿದ್ದು ಈಗ ೫–೬ ಕೋಟಿ ರೂ.ಗಳಷ್ಟು ನಷ್ಟದಲ್ಲಿರುವುದು ಮತ್ತು ಈಗಾಗಲೇ ಕಾರ್ಖಾನೆಯ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಈ ಸಕ್ಕರೆ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಕಾರ್ಮಿಕರನ್ನು ತೆಗೆದು ಹಾಕಿದ್ದರಿಂದ ನೌಕರರು ಬೀದಿ ಪಾಲಾಗಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ನೌಕರರ ಜೀವನೋಪಾಯಕ್ಕೆ ಸರ್ಕಾರದವರು ಯಾವ ಕ್ರಮ ತೆಗೆದು ಕೊಂಡಿದ್ದಾರೆ ?

ಈ) ವಾಣಿ ವಿಲಾಸ ಸಕ್ಕರೆ ಕಾರ್ಖಾನೆಯು ನಷ್ಟದಲ್ಲಿರಲು ಕಾರಣವೇನು ?

ಉ) ಹಾಗಿದ್ದಲ್ಲಿ ಕಾರ್ಖಾನೆಯು ಲಾಭದಾಯಕವಾಗಿ ನಡೆಯುವಂತಾಗಲು ಕೈಕೊಂಡ ಕ್ರಮ ವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು)

ಅ) ಹೌದು

ಸಾಕಷ್ಟು ಕಬ್ಬು ದೊರೆಯದಿದ್ದರಿಂದ ಕಾರ್ಖಾನೆಯು ಕಬ್ಬು ಅರೆಯುವ ಕಾರ್ಯಾಚರಣೆಯನ್ನು ನಿಲ್ಲಿಸಿದೆ. ಈ ಕಾರ್ಖಾನೆಯ ಲೆಕ್ಕಪತ್ರಗಳು ೧೯೮೩–೮೪ರ ವರೆಗೆ ತಪಾಸಣೆಯಾಗಿದ್ದು ಇದು ಒಟ್ಟು ೪.೪೮ ಕೋಟಿ ರೂ.ಗಳಷ್ಟು ನಷ್ಟದಲ್ಲಿರುತ್ತದೆ.

ಆ) ಈ ಕಾರ್ಖಾನೆಗೆ ಮುಖ್ಯವಾಗಿ ವಾಣೀವಿಲಾಸ ಸಾಗರದ ಅಚ್ಚುಕಟ್ಟಿನಲ್ಲಿ ಬೆಳೆಯುವ ಕಬ್ಬನ್ನು ಸರಬರಾಜು ಮಾಡಲಾಗುತ್ತಿತ್ತು. ಆದರೆ ಕಳೆದ ೩–೪ ವರ್ಷಗಳಿಂದ ಮಳೆಯ ಅಭಾವದಿಂದ ವಾಣೀವಿಲಾಸ ಸಾಗರಕ್ಕೆ ನೀರು ಬರದಿದ್ದುದರಿಂದ ಈ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲು ಸಾಧ್ಯವಾಗಲಿಲ್ಲ. ಇದರಿಂದ ಕಾರ್ಖಾನೆಗೆ ಸಾಕಷ್ಟು ಕಬ್ಬು ದೊರೆಯದ ಪ್ರಯುಕ್ತ ಬೇರೆ ದಾರಿಯಿಲ್ಲದೆ ಈ ಕಾರ್ಖಾನೆಯ ಕೆಲಸಗಾರರನ್ನು ೩–೪–೧೯೮೫ ರಿಂದ ''ಲೇ ಆಫ್'' ಮಾಡಲಾಯಿತು.

ಇ) ಸಕ್ಕರೆ ಉದ್ಯಮವು ''ಸೀಜನಲ್'' ಉದ್ಯಮವೆಂಬ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದೆ. ಆದುದರಿಂದ ಕಾರ್ಖಾನೆಯು ಲೇ ಆಫ್ ಮಾಡಲಾಗಿರುವ ಕಾರ್ಮಿಕರಿಗೆ ಯಾವ ರೀತಿಯ ಪರಿಹಾರವನ್ನು ಕೊಡುವ ಹೊಣೆಗಾರಿಕೆ ಇರುವುದಿಲ್ಲ. ಲೇ ಆಫ್ ಮಾಡಲಾಗುವ ಎಲ್ಲಾ ಕಾರ್ಮಿಕರಿಗೆ ಪರಿಹಾರವನ್ನು ಕೊಡಲು ಸರ್ಕಾರದಿಂದ ಧನ ಸಹಾಯವನ್ನು ಕೊಡಲು ಸಾಧ್ಯವಾಗುವುದಿಲ್ಲ.

ಈ) ಈ ಕಾರ್ಖಾನೆಯು ಅನುಭವಿಸಿರುವ ನಷ್ಟಕ್ಕೆ ಕಾರಣಗಳು.

೧. ಈ ಕಾರ್ಖಾನೆಗೆ ತನ್ನ ಕಬ್ಬು ಅರೆಯುವ ಸಾಮರ್ಥ್ಯದಷ್ಟು ಕಬ್ಬು ದೊರಕದೇ ಇರುವುದು.